ಕರ್ನಾಟಕ ಸರ್ಕಾರ

*ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ ಐವಾನ್-ಎ-ಶಾಹಿ- ಬಡಾವಣೆ ಕಲಬುರಗಿ*

ದಿನಾಂಕ: 10/10/2022

ಸಂಖ್ಯೆ:ಸಿ2(1)ಆಡಳಿತ:ಸಿ-ವಲಯ:ಖಾಹುಸ್ಯ:02:2022-23

**ಪರಿಷ್ಕೃತ ವೇಳಾಪಟ್ಟಿ**

**ವಿಷಯ:** ದಿನಾಂಕ: 21/06/2022 ರಂದು ಸಹ ಶಿಕ್ಷಕರ ಹುದ್ದೆಯಿಂದ ಗ್ರೂಪ್-ಬಿ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಹುದ್ದೆಗೆ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1958ರ ನಿಯಮ-32 ರಡಿ ಸ್ವತಂತ್ರ ಪ್ರಭಾರದಲ್ಲಿರಿಸಿದ ಸಹ ಶಿಕ್ಷಕರಿಗೆ ಸ್ಥಳ ನಿಯುಕ್ತಿಗಾಗಿ "ಸಿ" ವಲಯದ ಹುದ್ದೆಗಳನ್ನು ತೆರವುಗೊಳಿಸಲು ಗಣಕೀಕೃತ ಕೌನ್ಸಿಲಿಂಗ ಮೂಲಕ ಘಟಕದೊಳಗಿನ ವರ್ಗಾವಣೆ ಮಾಡುವ ಬಗ್ಗೆ

**ಉಲ್ಲೇಖ: ಈ ಕಛೇರಿ ಜ್ಞಾಪನ ಸಮ ಸಂಖ್ಯೆ ದಿನಾಂಕ: 01/10/2022.**

*********

ದಿನಾಂಕ: 21/06/2022 ರಂದು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1958ರ ನಿಯಮ-32 ರಡಿ ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರ ಹುದ್ದೆಯಿಂದ ಗ್ರೂಪ್-ಬಿ ವೃಂದದ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ/ತತ್ಸಮಾನ ಹುದ್ದೆಯ, ಸ್ವತಂತ್ರ ಪ್ರಭಾರದಲ್ಲಿರಿಸಿದ ಸಹ ಶಿಕ್ಷಕರಿಗೆ ಸ್ಥಳ ನಿಯುಕ್ತಿಗಾಗಿ "ಸಿ" ವಲಯದ ಹುದ್ದೆಗಳನ್ನು ತೆರವುಗೊಳಿಸಲು ಗಣಕೀಕೃತ ಕೌನ್ಸಿಲಿಂಗ ಮೂಲಕ ಉಲ್ಲೇಖಿತ ಜ್ಞಾಪನದನ್ವಯ ಹಮ್ಮಿಕೊಳ್ಳಲಾದ ಘಟಕದೊಳಗಿನ ಪ್ರಕ್ರಿಯೆಯ ವೇಳಾ ಪಟ್ಟಿಯನ್ನು ಈ ಕೆಳಗಿನಂತೆ ಪರಿಷ್ಕರಿಸಿದೆ. ವೇಳಾಪಟ್ಟಿ ಹೊರತುಪಡಿಸಿ ಉಲ್ಲೇಖಿತ ಜ್ಞಾಪನದ ಎಲ್ಲಾ ಷರತ್ತುಗಳು ಮುಂದುವರಿಯುತ್ತವೆ.

| ಕ್ರಸಂ | ವಿವರ | ದಿನಾಂಕ | ಕ್ರಮ ವಹಿಸುವ ಅಧಿಕಾರಿಗಳು |
|---|---|---|---|
| 01 | ಕೋರಿಕೆ ವರ್ಗಾವಣೆ ಬಯಸುವ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಮತ್ತು ತತ್ಸಮಾನ ಗ್ರೂಪ್-ಬಿ ವೃಂದದ ಅಧಿಕಾರಿಗಳಿಂದ ಅರ್ಜಿಗಳನ್ನು ಕರೆಯಲು ಪ್ರಕಟಣೆ | 01/10/2022 | ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ |
| 02 | ವರ್ಗಾವಣೆ ಕೋರುವ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಮತ್ತು ತತ್ಸಮಾನ ಗ್ರೂಪ್-ಬಿ ವೃಂದದ ಅಧಿಕಾರಿಗಳು ಅಂತರ್ಜಾಲದ (On line) ಮೂಲಕ ವರ್ಗಾವಣೆ ಆದ್ಯತೆಗೆ ನಿಗಧಿಪಡಿಸಿರುವ ದಾಖಲೆಗಳನ್ನು / ಪ್ರಮಾಣ ಪತ್ರದೊಂದಿಗೆ ಇಲಾಖೆ ನಿಗಧಿ ಪಡಿಸಿರುವ ನಮೂನೆಯಲ್ಲಿ ಅರ್ಜಿ ಸಲ್ಲಿಸುವ ದಿನಾಂಕ | ದಿ:06/10/2022 ರಿಂದ ದಿ:27/10/2022 | "ಬಿ" ಮತ್ತು "ಸಿ" ವಲಯದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ಗ್ರೂಪ್-ಬಿ ವೃಂದದ ಅಧಿಕಾರಿಗಳು ಮಾತ್ರ |
| 03 | ಅರ್ಜಿಗಳ ಪರಿಶೀಲನೆ ಮತ್ತು ಅನುಮೋದನೆ: ಸೇವಾ ದಾಖಲೆಗಳೊಂದಿಗೆ ತಾಳೆ ನೋಡಿ ಅಂತರ್ಜಾಲದಲ್ಲಿ (ಆನ್-ಲೈನ್) ಅರ್ಜಿಗಳನ್ನು | ದಿ:06/10/2022 ರಿಂದ ದಿ:29/10/2022 | ವರ್ಗಾವಣೆಗೆ ಅರ್ಜಿ ಸಲ್ಲಿಸಿರುವ ಎಲ್ಲಾ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಮತ್ತು ತತ್ಸಮಾನ ಗ್ರೂಪ್-ಬಿ |

| | | | |
|---|---|---|---|
| | ಪರಿಶೀಲಿಸಿ ಮಾಹಿತಿಯನ್ನು ದೃಢೀಕರಿಸಿ ಆನ್-ಲೈನ್ ನಲ್ಲಿ ಅರ್ಜಿಗಳನ್ನು ಅನುಮೋದಿಸಲು ನಿಗದಿಪಡಿಸಿರುವ ಅವಧಿ | | ವೃಂದದ ಅಧಿಕಾರಿಗಳು ಅರ್ಜಿ ಸಲ್ಲಿಸಿದ ನಂತರ ಎರಡು ದಿನಗಳ ಒಳಗಾಗಿ ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ರವರ ಕಛೇರಿಗೆ ದಾಖಲೆಗಳೊಂದಿಗೆ ಖುದ್ದಾಗಿ ಹಾಜರಾಗುವುದು.<br>ಕ್ರಮ: ಉಪ ನಿರ್ದೇಶಕರು(ಆಡಳಿತ)ರವರು |
| 04 | ವಿಭಾಗದ ಒಳಗೆ ಕೋರಿಕೆ ವರ್ಗಾವಣೆ ಬಯಸಿ ಅರ್ಜಿ ಸಲ್ಲಿಸಿರುವ ಮುಖ್ಯ ಶಿಕ್ಷಕರುಗಳ ಕರಡು ಅರ್ಹ ಮತ್ತು ಅನರ್ಹ ಆದ್ಯತಾ ಪಟ್ಟಿ ಪ್ರಕಟಣೆ (ತಂತ್ರಾಂಶದಲ್ಲಿದ್ದಂತೆ) | 02/11/2022 | ವಿಭಾಗದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು (ಆಡಳಿತ) |
| 05 | ವಿಭಾಗದ ಒಳಗೆ ವರ್ಗಾವಣೆ ಬಯಸಿ ಅರ್ಜಿ ಸಲ್ಲಿಸಿರುವ ಮುಖ್ಯ ಶಿಕ್ಷಕರುಗಳ ತಾತ್ಕಾಲಿಕ ಆದ್ಯತಾ ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ನಿಗದಿಪಡಿಸಿರುವ ಅವಧಿ ಮತ್ತು ತೀವ್ರತರ ಕಾಯಿಲೆ ಮತ್ತು ದಿವ್ಯಾಂಗ ನೌಕರರು ವೈದ್ಯಕೀಯ ಮಂಡಳಿಯಿಂದ ಪ್ರಮಾಣ ಪತ್ರ ಹಾಜರುಪಡಿಸಲು. | ದಿ:03/11/2022 ರಿಂದ ದಿ:10/11/2022 | ಜಿಲ್ಲಾ ಉಪ ನಿರ್ದೇಶಕರು (ಆಡಳಿತ)ರವರ ಹಂತದಲ್ಲಿ ಆಕ್ಷೇಪಣೆಗಳನ್ನು ಸ್ವೀಕರಿಸುವುದು. |
| 06 | ವಿಭಾಗದ ಒಳಗೆ ವರ್ಗಾವಣೆ ಬಯಸಿ ಅರ್ಜಿ ಸಲ್ಲಿಸಿರುವ ಮುಖ್ಯ ಶಿಕ್ಷಕರುಗಳ ತಾತ್ಕಾಲಿಕ ಆದ್ಯತಾ ಪಟ್ಟಿಗೆ ಸಲ್ಲಿಕೆಯಾಗುವ ಆಕ್ಷೇಪಣೆಗಳ ಪರಿಶೀಲನೆ ಮತ್ತು ಓಪನ್ ಹೀಯರಿಂಗ ಮಾಡಲು ನಿಗದಿಪಡಿಸಿರುವ ಅವಧಿ | ದಿ: 11/11/2022 ರಿಂದ ದಿ: 15/11/2022 | ಜಿಲ್ಲಾ ಉಪ ನಿರ್ದೇಶಕರು (ಆಡಳಿತ) |
| 07 | ಕುಂದುಕೊರತೆಗಳ ಆಲಿಕೆ: | 16/11/2022 | ಸಹ ನಿರ್ದೇಶಕರು(ಆಡಳಿತ), ಅಪರ ಆಯುಕ್ತರ ಕಛೇರಿ, ಕಲಬುರಗಿ ಇವರು ವರ್ಗಾವಣೆಗೆ ಸಂಬಂಧಿಸಿದ ಆಕ್ಷೇಪಣೆಗಳು ಸಲ್ಲಿಕೆಯಾದಲ್ಲಿ ಆಲಿಸಿ ಅಂತಿಮಗೊಳಿಸುವುದು. |
| 08 | ವಿಭಾಗದ ಒಳಗೆ ವರ್ಗಾವಣೆ ಬಯಸಿ ಅರ್ಜಿ ಸಲ್ಲಿಸಿರುವ ಮುಖ್ಯ ಶಿಕ್ಷಕರುಗಳ ತಾತ್ಕಾಲಿಕ ಆದ್ಯತಾ ಪಟ್ಟಿಗೆ ಸಲ್ಲಿಕೆಯಾಗುವ ಆಕ್ಷೇಪಣೆಗಳ ಪರಿಶೀಲನೆ ನಂತರ ಹಾಗೂ ಮೇಲ್ಮನವಿಯಲ್ಲಿ ಬಂದಿರುವ ನಿರ್ದೇಶನಗಳನುಸಾರ ಅರ್ಜಿಗಳ ಇಂದೀಕರಣ ಮತ್ತು ಅಂತಿಮ ಅರ್ಹ ಆದ್ಯತಾ ಪಟ್ಟಿ ಹಾಗೂ "ಎ" ಮತ್ತು "ಬಿ" ವಲಯದಲ್ಲಿ ಖಾಲಿ ಇರುವ ಗ್ರೂಪ್-ಬಿ ಮುಖ್ಯ | 17/11/2022 | ಜಿಲ್ಲಾ ಉಪ ನಿರ್ದೇಶಕರು (ಆಡಳಿತ) |

| | | | |
|---|---|---|---|
| | ಶಿಕ್ಷಕರು/ತತ್ಸಮಾನ ಹುದ್ದೆಗಳ ಪಟ್ಟಿ ಪ್ರಕಟಣೆ. | | |
| 09 | ವಲಯವಾರು ಖಾಲಿ ಹುದ್ದೆಗಳ ಮಾಹಿತಿನ್ನು ನಿಗಧಿಪಡಿಸಿರುವ ತಂತ್ರಾಂಶದಲ್ಲಿ ಭರ್ತಿ ಮಾಡುವುದು | 18/11/2022 ರ ವರೆಗೆ | 3 ವಿಭಾಗದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು (ಆಡಳಿತ)<br>4 ಅಪರ ಆಯುಕ್ತರ ಕಛೇರಿ |
| 10 | ಕಲಬುರಗಿ ಆಯುಕ್ತರ ವ್ಯಾಪ್ತಿಯಲ್ಲಿ ಘಟಕದೊಳಗೆ ಕೋರಿಕೆ ವರ್ಗಾವಣೆಗಳಿಗೆ ಆನ್-ಲೈನ್ ಕೌನ್ಸಲಿಂಗ್.<br>• 'ಬಿ' ವಲಯದ ಶಿಕ್ಷಕರಿಗೆ 'ಎ' ವಲಯಕ್ಕೆ ವರ್ಗಾವಣಾ ಕೌನ್ಸಿಲಿಂಗ<br>• 'ಸಿ' ವಲಯದಿಂದ 'ಎ' & 'ಬಿ' ವಲಯಕ್ಕೆ ವರ್ಗಾವಣೆ ಕೌನ್ಸಿಲಿಂಗ | ದಿ: 21/11/2022 (ಬೆಳಿಗ್ಗೆ 10.30 ಗಂಟೆಗೆ) | ನಿರ್ದೇಶಕರು, ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ<br><br>**ಆಯುಕ್ತರ ಕಛೇರಿ ಸಭಾಂಗಣ, ಕಲಬುರಗಿ** |
| 11 | ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಹುದ್ದೆಯ ಸ್ವತಂತ್ರ ಪ್ರಭಾರದಲ್ಲಿರಿದ ನೌಕರರಿಗೆ ಸ್ಥಳ ನಿಯುಕ್ತಿಗಾಗಿ ಕೌನ್ಸಿಲಿಂಗ ನಡೆಸುವ ದಿನಾಂಕ | 21/11/2022 (ಮಧ್ಯಾಹ್ನ 3.00 ಗಂಟೆಗೆ) | **ಆಯುಕ್ತರ ಕಛೇರಿ ಸಭಾಂಗಣ, ಕಲಬುರಗಿ** |

(ಗರಿಮಾ ಪಂವಾರ ಭಾ.ಆ.ಸೇ)
ಅಪರ ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ

ಪ್ರತಿಗಳನ್ನು:

1) ಸರಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು
2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು ರವರ ಅಗತ್ಯ ಕ್ರಮಕ್ಕಾಗಿ
3) ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ, ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಬಳ್ಳಾರಿ ಹಾಗೂ ಕೊಪ್ಪಳ
4) ಪ್ರಾಂಶುಪಾಲರು, ಸರಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಕಲಬುರಗಿ
5) ವಿಭಾಗದ ಎಲ್ಲಾ ಉಪ ನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ
6) ವಿಭಾಗದ ಎಲ್ಲಾ ಪ್ರಾಚಾರ್ಯರು ಡಯಟ್ ಇವರಿಗೆ.
7) ಈ ಕಛೇರಿಯ ಇ-ಆಡಳಿತ, ಶಾಖೆಯ, ಹಿರಿಯ ಸಹಾಯಕ ನಿರ್ದೇಶಕರು, ಇವರಿಗೆ ನೀಡುತ್ತ, ಇಲಾಖೆಯ ಅಧೀಕೃತ ಅಂತರ್ಜಾಲದಲ್ಲಿ ಅಳವಡಿಸಲು ತಿಳಿಸಿದೆ.